ಶಿವನನ್ನು ನೋಡುವದಾಗಿದ್ದರೆ, ಜಗತ್ತಿನ ಹೊಲಸನ್ನು ತೊಳೆಯತಕ್ಕಂಥ ರೀತಿಯಲ್ಲಿ ಆತನನ್ನು ನೋಡುತ್ತೇನೆಂದು ಆತ ಹೇಳಿದ್ದಾನೆ. ಇದರ ಒಂದು ಕೊನೆಯ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಇದರಲ್ಲಿ ಶಿವನ ಪಾತ್ರವನ್ನು ಮಾಡಿದ್ದೆ ಎಂದು ಮಾನ್ಯ ವಾಟಾಳ್ ನಾಗರಾಜ್ ರವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಜಗದ ಜಲಗಾರ ನಾನೆಂದು ಶಿವ ಈ ರೀತಿಯಾಗಿ ಹೇಳುತ್ತಾನೆ.

"ಬೀದಿ ಗುಡಿಸುವ ಬಡವರ ಎದೆಯಲ್ಲಿ ನಾನಿರುವೆ
ಉಳುತ್ತಿರುವ ಒಕ್ಕಲಿಗನ ಎದೆಯಲ್ಲಿ ನಾನಿರುವೆ
ಎಲ್ಲಿ ಹೊಲಿಯನು ತನ್ನ ಕಾರ್ಯದಲ್ಲಿ ತೊಡಗಿಹನೋ
ಎಲ್ಲಿ ನಾನು ಅವನ ಪಕ್ಕದೊಳಗಿರುವೆ, ಕುಂಟರನು,
ಕುರುಡರನು, ದೀನರನು, ಅನಾಥರನ್ನು ಕೈಹಿಡಿದು
ಪೊರೆಯುದಲ್ಲಿ ನಾನಿರುವೆ ಎಂದು ಶಿವ ಹೇಳುತ್ತಾನೆ"

ಮಾನ್ಯ ಯಡಿಯೂರಪ್ಪನವರು ಬಜೆಟ್ ಆ ಮಟ್ಟಕ್ಕೆ ಹೋಗದಿದ್ದರೂ ಕೂಡ ಪರಿತ್ಯೆಕ್ತವಾದ ಲಿಫ್ಟ್ ಓವರ್ ಕಮ್ಯುನಿಟಿಗಳಿಗೆ ಅಂದರೆ ನಿಕೃಷ್ಟವಾಗಿರತಕ್ಕಂಥ ಜನಗಳಿಗೆ ಹಿಂದುಳಿದವಂಥವರಿಗೆ, ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಸಂಬಂಧಪಟ್ಟಂಥ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣಕಾಸನ್ನು ಒದಗಿಸುವುದರ ಮೂಲಕವಾಗಿ ಒಂದು ಲಿಂಗ ತಾರತಮ್ಯವನ್ನು ತೆಗೆದು ಹಾಕುವಂಥ ಒಳ್ಳೆಯ ಉತ್ತಮವಾದಂಥ ಬಜೆಟ್‌ನ್ನು ಕೊಟ್ಟಿದ್ದಾರೆ. ಕೆಲವು ನೂನ್ಯತೆಗಳನ್ನು ಅವರು ಸರಿಪಡಿಸಿಕೊಂಡು, ಇದರ ಬಗ್ಗೆ ಅವರ ಮುಂದಿನ ಉತ್ತರದಲ್ಲಿ ಸ್ಪಷ್ಟೀಕರಣ ಕೊಡುವಾಗ ಸರಿಪಡಿಸಬಹುದೆಂಬ ಮಾತನ್ನು ತಮಗೆ ಹೇಳಿ ನಾನು ಅವರಿಗೆ ಅಭಿನಂದಿಸಿ ಮತ್ತು ಸ್ವಾಗತಮಾಡಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಹಾಗೆಯೇ ತಾವು ನನಗೆ ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

5. ಪ್ರಕಟಣೆ

ವಿಷಯ : ಸದನವನ್ನು 5ನೇ ಏಪ್ರಿಲ್ 2006 ರವರೆಗೆ ನಡೆಸುವ ಬಗ್ಗೆ.

ಉಪಾಧ್ಯಕ್ಷರು : ದಿನಾಂಕ 23:03:2006 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಕೆಳಕಂಡಂತೆ ನಿರ್ಣಯಿಸಲಾಗಿದೆ.

" ಸದನವನ್ನು ದಿನಾಂಕ 25ನೇ ಮಾರ್ಚ್ ಹಾಗೂ 3 ರಿಂದ 5ನೇ ಏಪ್ರಿಲ್ 2006ರವರೆಗೂ ನಡೆಸುವುದು. ಮೇಲಿನ ದಿನಗಳಲ್ಲಿ ವಿಧೇಯಕಗಳನ್ನು ಅರ್ಧಗಂಟೆ ಕಾಲಾವಧಿ ಚರ್ಚೆ ಮತ್ತು ಇನ್ನಿತರ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಲಾಗುವುದು. ಆಯವ್ಯಯ ಅಂದಾಜುಗಳ ಮೇಲೆ ನಡೆದ ಚರ್ಚೆಗೆ ಈ ದಿನ ಮಧ್ಯಾಹ್ನ 3.00 ಗಂಟೆಗೆ ಸರ್ಕಾರದ ಉತ್ತರ. ಇದಕ್ಕೆ ಸದನದ ಸಹಮತ ಇದೆ ಎಂದು ಭಾವಿಸುತ್ತೇನೆ."

ಉಪಾಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ತಾವು ಮಾತನಾಡಿ.